ನಾಗರಾಜು ಹಾವೇರಿ (99010 52578)

## ಯಾಥಾರ್ಥ ವಿಷಯಗಳಲ್ಲಿ ರಾಜರುಗಳು

| ಯಥಾರ್ಥ ವಿಷಯಗಳು | “ರಾಜ” |
|---|---|
| ಬ್ರಹ್ಮಸೂತ್ರಭಾಷ್ಯದ ಅಧಿಕರಣಗಳಲ್ಲಿ | ವೈಶ್ವಾನರಾಧಿಕರಣ |
| ದಶಪ್ರಕರಣಗಳಲ್ಲಿ | ಶ್ರೀಮದ್ಭಾಗವತಮಹಾಪುರಾಣ |
| ಉಪನಿಷದ್ಭಾಷ್ಯಗಳಲ್ಲಿ | ಶ್ರೀಮದೈತರೇಯಭಾಷ್ಯ |
| ಮಂತ್ರಗಳಲ್ಲಿ | ಮಣಿಮಂತ್ರ ಧನ್ವಂತರೀ |
| ಯಂತ್ರಗಳಲ್ಲಿ | ಚಕ್ರಾಬ್ಜಮಂಡಲ |
| ತಂತ್ರಗಳಲ್ಲಿ | ಸಹಸ್ರಾರ |
| ಕ್ಷೇತ್ರಗಳಲ್ಲಿ | ಬದರಿಕಾಶ್ರಮ |
| ತೀರ್ಥಗಳಲ್ಲಿ | ಪ್ರಯಾಗಮಾಧವ |
| ಚಿತ್ರರಾಜ | ಸೂರ್ಯಮಂಡಲ |
| ರಾಗ | ದೇವಗಾಂಧಾರ |
| ಲೋಹರಾಜ | ಸುವರ್ಣ |
| ಟೀಕಾರಾಜ | ಶ್ರೀಮನ್ನ್ಯಾಯಸುಧಾ |
| ಟಿಪ್ಪಣಿಗಳ ರಾಜ | ಶ್ರೀಪರಿಮಳ |
| ಕಾವ್ಯರಾಜ | ಶ್ರೀ ರುಕ್ಮಿಣೀಶವಿಜಯ |
| ಸ್ತೋತ್ರರಾಜ | ಶ್ರೀ ವಿಷ್ಣು ಸಹಸ್ರನಾಮ |
| ಪ್ರಚಂಡವಾದಿಗಳರಾಜ | ಶ್ರೀಮದ್ವ್ಯಾಸರಾಜತೀರ್ಥರು |

ಈ ಮೇಲಿನ ಯಥಾರ್ಥ ವಿಷಯಗಳಂತೆ ಉದ್ಧಾರಕ ಗುರುಗಳ ರಾಜ – ಮಂತ್ರಾಲಯ ಪ್ರಭುಗಳಾದ ಶ್ರೀಗುರುರಾಜರು. ಅವರೇ ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರು – ಕಲಿಯುಗದ ಕಾಮಧೇನು, ಕಲ್ಪವೃಕ್ಷರೆಂದು ಅಧುನಾ ಪ್ರಖ್ಯಾತರು.

ವಾಯುನಾಚ ಸಮಾವಿಷ್ಟಃ ಮಹಾಬಲ ಸಮನ್ವಿತ: ।
ಪ್ರಹ್ಲಾದಾದುತ್ತಮಃ ಕೋನು ವಿಷ್ಣುಭಕ್ತೌ ಜಗತ್ತ್ರಯೇ ।
ಪ್ರಹ್ಲಾದೋ ನಿತ್ಯಭಕ್ತಿಮಾನ್ – ಎಂಬ ಶ್ರೀಮದಾಚಾರ್ಯರ ನಿರ್ಣಯೋಕ್ತಿಗಳಿಂದಲೂ,

ಬ್ರಹ್ಮಣ್ಯಃ ಶೀಲಸಂಪನ್ನಃ ಸತ್ಯಸಂಧೋ ಜಿತೇಂದ್ರಿಯಃ ।
ಪ್ರಶಾಂತ ಕಾಮೋರಹಿತಾಸುರೋಽಸುರಃ ।

ಮಹದರ್ಭಕಃ ಮಹದುಪಾಸಕಃ ನಿರ್ವೈರಾಯ ಪ್ರಿಯಸುಹೃತ್ತಮಃ ಮಾನಸ್ತಂಭವಿವರ್ಜಿತಃ ಯಥಾ ಭಗವತೀಶ್ವರೇ – ಇತ್ಯಾದಿ ಶ್ರೀಮದ್ಭಾಗವತಗ್ರಂಥಸ್ಥ ಶ್ರೀಮದ್ವೇದವ್ಯಾಸದೇವರ ವಿಶೇಷಣಗಳಿಂದ ಭೂಷಿತರಾದ ಶ್ರೀ ಪ್ರಹ್ಲಾದರಾಜರು ಪರಮ ಭಾಗವತೋತ್ತಮರು. ಇಂಥಾ ಮಹಾನುಭಾವರನ್ನು ಚತುಃಷಷ್ಠಿಕಲಾಸಂಪನ್ನರಾದ ಶ್ರೀಮದ್ವಿಜಯೀಂದ್ರತೀರ್ಥರು – ಪ್ರಹ್ಲಾದರಾಜರೇ ಶ್ರೀವ್ಯಾಸರಾಜರಾಗಿ ಅವತರಿಸಿದರೆಂದು ತಮ್ಮ ಶ್ರೀವ್ಯಾಸರಾಜಸ್ತೋತ್ರದಲ್ಲಿ ಪ್ರಹ್ಲಾದಸ್ಯಾವತಾರೋಽಸಾವೀಂದ್ರಸ್ಯಾನುಪ್ರವೇಶನಾತ್ । ತೇನೆ ತತ್ಸೇವಿನಾಂ ನೃಣಾಂ ಸರ್ವಮೇತದ್ಭವೇದ್ಧ್ರುವಮ್ ॥ ಎಂದು ವರ್ಣಿಸಿದ್ದಾರೆ ಹಾಗೂ ಇಂದ್ರದೇವರ ವಿಶೇಷ ಸನ್ನಿಧಾನವುಳ್ಳವರೆಂದೂ ಸಮರ್ಥಿಸಿದ್ದಾರೆ. ಇಂತಹ ಶ್ರೀಮದ್ವ್ಯಾಸರಾಜರೇ ಶ್ರೀರಾಘವೇಂದ್ರತೀರ್ಥರಾಗಿ ಅವತರಿಸಿದರೆಂದು ಶ್ರೀವಿಜಯದಾಸರೇ ಮೊದಲಾದ ಅಪರೋಕ್ಷಜ್ಞಾನಿವರೇಣ್ಯರು ಕೊಂಡಾಡಿದ್ದಾರೆ.

ಅಲವಬೋಧ ಮಿಕ್ಕಾದ ಮಹಾಮುನಿಗಳ ಸಾಂಶರು ಒಂದು ರೂಪದಿ ನೆಲೆಯಾಗಿ ನಿತ್ಯದಲಿ ಇಪ್ಪರು ಒಲಿಸಿಕೊಳುತಲಿ ಹರಿಯ ಗುಣಗಳ ತಿಳಿದು ತಿಳಿಸುತ ತಮ್ಮ ತಮಗಿಂತಧಿಕರಿಂದುಪದೇಶ ಮಾರ್ಗದಿ ಕಲಿಯುಗದೊಳು ಕೇವಲ ಕತ್ತಲೆಯ ಹರಿಸುವ ಸೊಬಗ ಸಂತತ ।

ಎಂದು ತಿಳಿಸುತ್ತಾ ಶ್ರೀಜಯತೀರ್ಥಗುರುಗಳೆಲ್ಲರೂ ಇವರಲ್ಲಿ ವಿಶೇಷ ಸನ್ನಿಧಾನದಿಂದ ಇದ್ದು, ಅಸದೃಶ ಗ್ರಂಥರಚನಾದಿ ಕಾರ್ಯಗಳನ್ನು ಇವರ ಮುಖಾಂತರ ಮಾಡಿಸುತ್ತಾ ಸಜ್ಜನರನ್ನು ಉದ್ಧರಿಸುತ್ತಿದ್ದಾರೆಂದು ವರ್ಣಿಸಿದ್ದಾರೆ.

ಶ್ರೀರಾಘವೇಂದ್ರತೀರ್ಥರಾದರೋ ಸಂಚರಿಸದ ಪುರಾಣೋಕ್ತಕ್ಷೇತ್ರಗಳಿಲ್ಲ. ದರ್ಶಿಸದ ಭಗವನ್ಮೂರ್ತಿಗಳಿಲ್ಲ. ಮೀಯದ ಮಹಾನದಿ – ತೀರ್ಥ ತಟಾಕಾದಿಗಳಿಲ್ಲ. ಜಪಿಸದ ವೈಷ್ಣವಮಂತ್ರಗಳಿಲ್ಲ. ತಪಗೈಯ್ಯದ ವನ – ಗುಹಾದಿಗಳಿಲ್ಲ. ಸಿದ್ಧಿಸದ ಯಾವುದೇ ಯೋಗಾದಿ ವಿದ್ಯಗಳಿಲ್ಲ. ಭಕ್ತರಿಗೆ ನಿವಾರಿಸದ ರೋಗಾದಿ ಉಪದ್ರವಗಳಿಲ್ಲ. ಬಿಡಿಸದ ಭೂತ – ಪ್ರೇತ – ಪಿಶಾಚಗಳಿಲ್ಲ. ಹಾಗೆಯೇ ಕೊಡದಿರುವ ಸತ್ಸಂಪತ್ತುಗಳಿಲ್ಲ. ವಿಬುಧಾನೀಕಕ್ಕೆ ಬರೆಯದ ವೇದಾಂತಾದಿ ಗ್ರಂಥಗಳಿಲ್ಲ. ವೇದ – ವೇದಾಂತ – ಕಾವ್ಯಾದಿ ಶಾಸ್ತ್ರಸಮುದ್ರದ ಆಳಗಲವನ್ನು ನಿರ್ಭಯವಾಗಿ – ನಿರಾಯಾಸವಾಗಿ ಈಜಬಲ್ಲ ವಿದ್ವತ್ತಿಮಿಂಗಿಲರಾದರೂ, ಶ್ರೀಮನ್ಮೂಲರಘುಪತಿಯ ಪಾದಕಮಲ ಮಧುಪರು. ಸದಾ ಶಾಂತಚಿತ್ತರು, ಕೃಷ್ಣಗ್ರಹಗೃಹೀತಾತ್ಮರು, ಭೂತದಯಾಪರರು, ಭಕ್ತಕಾಮನಾಪೂರ್ಣರು, ಹರಿಪಾದಕಂಜನಿಷೇವಣಾಲ್ಲಬ್ಧ ಸಮಸ್ತಸಂಪನ್ನರು.

ಅನ್ಯರಿಗಲಭ್ಯವಾದ ವೇದಭಾಷ್ಯಕಾರತ್ವ, ಟೀಕಾಕಾರತ್ವ, ಟಿಪ್ಪಣೀಕಾರತ್ವ, ವ್ಯಾಖ್ಯಾನಕಾರತ್ವ, ಸ್ವತಂತ್ರ ಗ್ರಂಥಕರ್ತೃತ್ವ, ನಾದೋಪಾಸಕತ್ವ ( ವೈಣಿಕರಾಗಿ ), ಮಂತ್ರಸಿದ್ಧಿತ್ವ ಹೀಗೆ ಹತ್ತು ಹಲವಾರು ಸ್ಥಾನಗಳಲ್ಲಿ ಪ್ರಸಿದ್ಧರು. ಇದು ಮೊದಲೇ ತಿಳಿಸಿದಂತೆ ಅವರಲ್ಲಿ ಶ್ರೀಹರಿವಾಯುಗಳ ವಿಶೇಷ ನಿತ್ಯ ಸನ್ನಿಧಾನವಿರುವುದೇ ಕಾರಣ ಎಂಬುದು ತತ್ವಜ್ಞಾನಿಗಳ ಅಭಿಮತ. ಆದ್ದರಿಂದಲೇ ತತ್ವಜ್ಞಾನಿಗಳ ಸಮುದಾಯ ಇವರನ್ನು ಗುರುಸಾರ್ವಭೌಮರೆಂದು ಕೊಂಡಾಡಿರುವುದು ಯಥಾರ್ಥವೇ. ಇಂತಹ ಧೀರಃಶ್ರೀರಾಘವೇಂದ್ರತೀರ್ಥರ ಗುರುಸಾರ್ವಭೌಮತ್ವ ಕೀರ್ತಿಯು ಎಂದಿಗೂ ಕುಂದದ ಕಂದದ ನಂದಾದೀಪದಂತೆ ಶ್ರೀಹರಿಯ ಸನ್ನಿಧಿಯಲ್ಲಿ ಪ್ರಜ್ವಲಿಸುತ್ತಿದೆ.

# ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರ ಮಹಿಮೆ

ಬೃಂದಾವನ ಪ್ರವೇಶ ( ಸಶರೀರ ) ಮಾಡಿ 337 ಸಂವತ್ಸರಗಳು ಗತಿಸಿದರೂ ಬೃಂದಾವನದ ಮೃತ್ತಿಕೆ, ಹಚ್ಚಿದ ಶ್ರೀಗಂಧ ಭಕ್ತರ ಬಹುವಿಧ ಬೇನೆ ಬೇಸರಿಕೆಗಳನ್ನು ಇಂದಿಗೂ ಹೋಗಲಾಡಿಸುತ್ತಿದೆ. ಬೃಂದಾವನಕ್ಕೆ ಅಭಿಷೇಕ ಮಾಡಿದ ( ತೊಳೆದ ) ನೀರನ್ನು ಸೇವಿಸಿದ ಭಕ್ತರಿಗೆ ಆ ಪಾದೋದಕವು ಮಂತ್ರಪೂತ ಜಲದಂತೆ ಭಯಂಕರ ರೋಗಾದಿ ಉಪದ್ರವಗಳನ್ನು ನಿವಾರಿಸುತ್ತಿದೆ. ಬೃಂದಾವನಕ್ಕೆ ಅಲಂಕರಿಸಿದ ವಸ್ತ್ರ, ಶ್ರೀತುಳಸಿ, ಮಲ್ಲಿಕಾದಿ ಪುಷ್ಪಗಳನ್ನು ಧರಿಸಿದ ಭಕ್ತರ ಜ್ಞಾನಪ್ರತಿಭೆಯು ದಿನದಿನಕ್ಕೆ ಹೆಚ್ಚುತ್ತಿದೆ. ಶ್ರೀರಾಯರ ಮಂತ್ರಾಕ್ಷತೆಯನ್ನು ಶಿರಸಾಧಾರಣೆ ಮಾಡಿದ ಭಕ್ತರನ್ನು ಕಂಡು ಭೂತ – ಪ್ರೇತ – ಪಿಶಾಚಾದಿಗಳು ದೂರದಲ್ಲೇ ನಿಲ್ಲುತ್ತಿವೆ. ಬೃಂದಾವನದ ಪ್ರದಕ್ಷಿಣೆ – ಸ್ತೋತ್ರ – ನಮಸ್ಕಾರ ಮಾಡಿದ ಭಕ್ತರ ಮನಸ್ಸು ಪರಿಶುದ್ಧ ಪುಷ್ಪದಂತೆ ಕಂಗೊಳಿಸುತ್ತಿದೆ. ಇವರ ಗ್ರಂಥಗಳನ್ನು ಅಧ್ಯಯನ, ಪಾರಾಯಣ, ಪ್ರವಚನ ಮಾಡುವ ಭಕ್ತನ ಮನಸ್ಸು ಮನನಕ್ಕೆ ತಿರುಗಿ, ಇಂದ್ರಿಯಂಗಳ ಮದವು ದೂರ ಸರಿದು ದಮಕ್ಕೆ ( ಇಂದ್ರಿಯ ಜಯ ) ಪರಿವರ್ತನೆಯಾಗುತ್ತಿದೆ. ಆದ್ದರಿಂದಲೇ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರ ಬೃಂದಾವನವನ್ನು ಇಂದು ಸ್ವಕೀಯರು – ಪರಕೀಯರು – ಸ್ವಜಾತೀಯರು – ಪರಜಾತೀಯರೆಂಬ ಭೇದ ಭಾವವಿಲ್ಲದೇ ಎಲ್ಲರೂ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರ ಚರಣಗಳಲ್ಲಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಲು ಸಾಲುಗಟ್ಟಿ ನಿಂತು ಸೇವಿಸುತ್ತಿದ್ದಾರೆ.

ಶ್ರೀಮದಾನಂದತೀರ್ಥರ ಸರ್ವಮೂಲಗ್ರಂಥಗಳು ಬಿಂಬಮೂರ್ತಿಯಾದರೇ, ಶ್ರೀರಾಘವೇಂದ್ರತೀರ್ಥ ಕೃತ ಪಂಚಾಶದಧಿಕ ಗ್ರಂಥಗಳು ಸರ್ವಮೂಲದ ಸ್ವಚ್ಛ ಪ್ರತಿಬಿಂಬದ ನಿಲುವುಗನ್ನಡಿಗಳಿದ್ದಂತೆ. ಇವರ ಒಂದೊಂದು ಗ್ರಂಥವೂ ಶ್ರೀಹರಿಯ ವಿರಾಡ್ರೂಪದರ್ಶನದಂತೆ ಅರ್ಥಾತ್ಮಕ ವಿಶ್ವರೂಪ. ತಪೋಬಲದಿಂದ ಶ್ರೀಹರಿಯನ್ನು

ಕಾಣುವಂತೆ, ತಪೋಬಲದಿಂದ ಈ ಗ್ರಂಥಸ್ಥ ವಿಷಯಗಳನ್ನು ( ಪ್ರಮೇಯಗಳನ್ನು ) ತಿಳಿಯುವ ಮಾರ್ಮಿಕ ಶಕ್ತಿರೂಪ. ಇಂತಹ ಗ್ರಂಥಸ್ಥವಿಷಯೋಪಾಸನೆಯಿಂದ ಭಕ್ತನ ಮನಸ್ಸು, ಶ್ರೀವಿಷ್ಣೋತ್ಕರ್ಷರಸಕಾರಂಜಿಯ ಹೆಪ್ಪು ಕಟ್ಟಿದ ಮಡುಗಳಾಗುತ್ತವೆ. ಇದುವೇ ಬಿಂಬ – ಪ್ರತಿಬಿಂಬ ಭಾವವನ್ನು ತಿಳಿಸುವ ಮಾರ್ಗ. ಇದುವೇ ಭಕ್ತಿಯ ಆನಂದದ ಗುರ್ವಂತರ್ಯಾಮಿ ಶ್ರೀಹರಿನಾಮದ ಪೂತ್ಕಾರವು. ಜನ್ಮಸಾರ್ಥಕ್ಯದ ಪರಿಪೂರ್ಣ ಭಾವ ವಿಶೇಷ. ಇಂತಹ ಸಾಧನಾ ಮಾರ್ಗ ತೋರಿದ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರು ಮಧ್ವಮತೋದ್ಧಾರಕ, ಮಧ್ವಮತದುಗ್ಧಾಬ್ಧಿಚಂದ್ರಮರೆಂಬುದು ಕಟುಸತ್ಯವಾಗಿದೆ. ಇಂತಹ ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರ ಗುಣ – ಮಹತ್ಮೆಗಳ ಮಾಲಿಕೆಯೇ ಶ್ರೀಮದಪ್ಪಣ್ಣಾಚಾರ್ಯರ ಶ್ರೀರಾಘವೇಂದ್ರಸ್ತೋತ್ರವಲ್ಲವೇ? ಅದನ್ನು ದಿನವೂ ಪಠಿಸಿದರೇ ಏನು ತಾನೇ ಸಿದ್ಧಿಸದು? ತವ ಸಂಕೀರ್ಥನಂ ವೇದಶಾಸ್ತ್ರಾರ್ಥಸಿದ್ಧಯೇ ಎಂಬುದೇ ನಮ್ಮೆಲ್ಲ ಭಕ್ತರ ಗುರಿಯಾಗಿದ್ದರೆ ಯಾವ ಶಾಸ್ತ್ರಾರ್ಥವೂ ಸುಲಭವಾಗಿ ಎಲ್ಲವೂ ತಿಳಿಯುತ್ತವೆ. ಇಂತಹ ಶ್ರೀಗುರುರಾಯರ ಸ್ಮರಣೆ ನಿತ್ಯ ನಿರಂತರ ನಮ್ಮದಾಗಲೀ ಎಂದು ಪ್ರಾರ್ಥಿಸೋಣ.